# ‘ಗಂಡನ ಶಂಕೆ ಸಿಡಿಲು ಬಡಿದಂತೆ!



ರಿಶಿಕಾ
ಉದಯದ
‘ಕನ್ಯಾದಾನ’ದ
ಚಿತ್ರಾ

◆ **ನಟನೆ ಮಾಡಬೇಕು ಅಂತ ಅನ್ನಿಸಿದ್ದು ಹೇಗೆ?**

ಬಿ.ಟೆಕ್ ಅಂತಿಮ ವರ್ಷದಲ್ಲಿ ಓದುತ್ತಿದ್ದೇನೆ. ಶಿವಮೊಗ್ಗ ಹುಟ್ಟಿದ ಊರಾದರೂ ಬೆಳೆದಿದ್ದು ಬೆಂಗಳೂರು. ಕಲರ್ಸ್ ಕನ್ನಡದಲ್ಲಿ ‘ಕೋಟ್ಯಧಿಪತಿ’ ಕಾರ್ಯಕ್ರಮವನ್ನು ಪುನೀತ್ ರಾಜ್‌ಕುಮಾರ್ ನಿರೂಪಿಸುತ್ತಿದ್ದರು. ಅದರಲ್ಲಿ ಭಾಗವಹಿಸಬೇಕು ಎಂಬ ಆಸೆಯಿಂದ ಪ್ರಯತ್ನ ಮಾಡಿದೆ. ಏನೋ ತಾಂತ್ರಿಕ ಕಾರಣದಿಂದ ನನಗೆ ಅವಕಾಶ ಸಿಗಲಿಲ್ಲ. ಅಪ್ಪು ಅಭಿಮಾನಿಯಾದ ನನಗೆ ಅವರ ಜೊತೆ ಸ್ವಲ್ಪ ಹೊತ್ತು ಮಾತನಾಡಬಹುದು ಎನ್ನುವುದೇ ದೊಡ್ಡ ಆಶೆ ಇತ್ತು. ಆ ಅವಕಾಶ ತಪ್ಪಿದೆ, ನಟಿಯಾದರೆ ಅವರ ಜೊತೆ ಸ್ಕ್ರೀನ್ ಕೂಡ ಷೇರ್ ಮಾಡುವ ಭಾಗ್ಯ ಸಿಗಬಹುದು ಎಂದು ಅಭಿನಯದ ಕನಸು ಕಾಣಲು ಶುರುಮಾಡಿದೆ. ಆಡಿಷನ್ ಕೊಡಲು ಆರಂಭಿಸಿದೆ.

◆ **ಟೆಕ್ಕಿ– ಪಾತ್ರ, ಒಳ್ಳೆಯ ಅವಕಾಶಗಳು ಏಕಕಾಲದಲ್ಲಿ ಸಿಕ್ಕರೆ ಯಾವುದನ್ನು ಒಪ್ಪುತ್ತೀರಿ?**

ನನಗೆ ಸಿಸ್ಟಮ್ ಮುಂದೆ ಕುಳಿತು ಕೆಲಸ ಮಾಡಲು ಸ್ವಲ್ಪವೂ ಆಸಕ್ತಿ ಇಲ್ಲ. ಓದುವಾಗ ತುಂಬ ಆಸಕ್ತಿಯಿಂದಲೇ ಓದಿದ್ದೇನೆ. ಆದರೆ ಕಂಪ್ಯೂಟರ್ ಕೆಲಸ ಎಂದರೆ ಏಕೋ ಬೋರ್ ಅನ್ನಿಸುತ್ತದೆ. ಜೀವನವೇ ಬೋರ್ ಆಗದಿರಲಿ ಎನ್ನುವುದನ್ನು ಓದುವಾಗಲೇ ಯೋಚಿಸಿದೆ. ಅದಕ್ಕೇ ಇದನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಇದೇ ವೃತ್ತಿ, ಪ್ಯಾಶನ್ ಎರಡೂ ಆಗಿದೆ. ಮನಸಿಗೆ ಒತ್ತಡ ಅಂತ ಅನ್ನಿಸುವುದಿಲ್ಲ. ಎಷ್ಟೇ ಹೊತ್ತು ಕೆಲಸ ಮಾಡಿದರೂ ಉಲ್ಲಾಸದಿಂದ ಇರಬಹುದು. ನಿತ್ಯವೂ ಭಿನ್ನ ಅನ್ನಿಸುತ್ತದೆ. ಹಾಗಾಗಿ ನಟನೆಯನ್ನೇ ಆಯ್ಕೆ ಮಾಡುವೆ.

◆ **ಬಣ್ಣ ಹಚ್ಚಿದ ಮೊದಲ ದಿನ ಹೇಗೆನಿಸಿತು?**

ಮೊದಲಿಗೆ ಬಂದಾಗ ಇಷ್ಟ ಆಗದೆ ಇದ್ದ ಒಂದು ಸಂಗತಿ ಏನೆಂದರೆ ಮೇಕಪ್. ಒಂದು ಆಡಿಷನ್ನಿಗೆ ಹೋದಾಗ ಮುಖಕ್ಕೆಲ್ಲ ಮೇಕಪ್ ಬಳಿದಿದ್ದರು. ನನ್ನ ಜೊತೆ ಬಂದಿದ್ದ ನನ್ನ ಅಮ್ಮನೇ ನನ್ನನ್ನು ಗುರುತಿಸಲು ಆಗದಷ್ಟು ರೂಪ ವಿನ್ಯಾಸ ಆಗಿತ್ತು. ಚೆನ್ನಾಗಿಲ್ಲ ತುಂಬ ಕೆಟ್ಟದಾಗಿ ಮಾಡಿದ್ದಾರೆ ಗುರುತೇ ಸಿಗುತ್ತಿಲ್ಲ ಎಂದು ನಮ್ಮಮ್ಮ ಕಾಮೆಂಟ್ ಮಾಡಿದ್ದರು. ನನಗೆ ಸೂಟ್ ಆಗುತ್ತಿರಲಿಲ್ಲ. ಮೇಕಪ್ ಇಲ್ಲದೇ ಚೆನ್ನಾಗಿದ್ದೇನೆಲ್ಲ ಎಂದು ಅನ್ನಿಸಿತು. ನನಗೆ ತೆಳುವಾಗಿ ಮೇಕಪ್ ಹಾಕಬೇಕು. ಕ್ರಮೇಣ ಇದೆಲ್ಲ ಸರಿ ಹೋಯಿತು. ನಟನೆ ಬಗ್ಗೆಯೂ ಗೊತ್ತಿರಲಿಲ್ಲ. ಸಹಜವಾಗಿ ನಟಿಸುತ್ತಾ ಬಂದೆ. ಅದೃಷ್ಟದಿಂದ ನನಗೆ ಅವಕಾಶ ಸಿಕ್ಕಿದೆ. ಇದು ಗುರು ಇಲ್ಲದೆ ಕಲಿತ ವಿದ್ಯೆ.

◆ **ಪಾತ್ರ ಒಂದಕ್ಕೆ ರೀಪ್ಲೇಸ್‌ಮೆಂಟ್ ಸವಾಲುಗಳು ಏನು?**

ಈ ಮೊದಲು ಒಂದು ಅವಕಾಶ ಸಿಕ್ಕಿತ್ತು. ಅದನ್ನು ಒಪ್ಪಲಿಲ್ಲ. ಇದನ್ನು ಮಾಡಬೇಕು ಎಂದು ಅನ್ನಿಸಿ ಮಾಡಿದೆ. ಮಾತು, ಶೈಲಿ, ಉಡುಗೆ, ತೊಡುಗೆ ಎಲ್ಲ ವಿಷಯದಲ್ಲೂ ಹಿಂದಿನ ಪಾತ್ರಧಾರಿಯ ಛಾಯೆಯನ್ನೇ ನಿರೀಕ್ಷಿಸುತ್ತಾರೆ. ಸಡನ್ ಆಗಿ ಪಾತ್ರ ಬದಲಾದರೆ ಆಗ ಋಣಾತ್ಮಕ ಕಮೆಂಟ್ ಮೊದಲು ಬರುತ್ತವೆ. ಪಾತ್ರಧಾರಿ ಎಷ್ಟೇ ಚೆನ್ನಾಗಿ ಮಾಡಿದರೂ ಅದು ತಪ್ಪದು. ಇವಳು ಸಣ್ಣ ಇದ್ದಾಳೆ, ತೆಳ್ಳಗಿದ್ದಾಳೆ, ದಪ್ಪಗಿದ್ದಾಳೆ ಇಂತಹ ಅನೇಕ ಮಾತೂ ಕೇಳುತ್ತವೆ. ಹೀಗಿದ್ದೂ ಪಾತ್ರ ಮಾಡಲು ಯೋಚನೆ ಮಾಡಿದೆ. ಕ್ಯಾರೆಕ್ಟರ್ ನೋಡಿ ನನ್ನದೇ ಮಾದರಿಯಲ್ಲಿ ಮಾಡಬೇಕು ಎಂದು ನಿರ್ಧರಿಸಿದೆ. ಮೊದಲಿನಂತೆ ನಾನೂ ಮಾಡಿದರೆ ಕಾಪಿ ಆಗುತ್ತದೆ. ನನ್ನದೇ ಧಾಟಿಯಲ್ಲಿ ಪಾತ್ರವನ್ನು ಅಭಿನಯಿಸುತ್ತಿದ್ದೇನೆ. ಚಿತ್ರಾ ಗಂಡನ ಮನೆಯಲ್ಲಿ ದುಃಖದ ಸನ್ನಿವೇಶದಲ್ಲಿ ಇದ್ದಳು. ಈಗ ಸತಿ ಪತಿಯಲ್ಲಿ ಅನ್ಯೋನ್ಯತೆ ಬರ್ತಿದೆ. ಪಾತ್ರದಲ್ಲಿಯೂ ಬದಲಾವಣೆ ಆಗಿದೆ, ಜನರೂ ಒಪ್ಪಿದ್ದಾರೆ.

◆ **ಸಂತೋಷದಲ್ಲಿದ್ದ ಚಿತ್ರಾಳಿಗೆ ಈ ಹಿಂಸೆ ಬೇಕಿತ್ತಾ?**

ಹೆಣ್ಣುಮಕ್ಕಳನ್ನು ಹೆತ್ತ ಬಹುತೇಕ ಪೋಷಕರು ತಮ್ಮ ಮಗಳು ಸುಖವಾಗಿ ಇರಬೇಕು ಎಂದು ಯೋಚಿಸುತ್ತಾರೆ. ಇಲ್ಲೂ ಕೂಡ ಅದೇ ಭಾವನೆ ಇದೆ. ನಮ್ಮ ಕಥೆಯಲ್ಲಿ ಅಮ್ಮ ಇಲ್ಲ. ಅಪ್ಪನೇ ಅಮ್ಮನ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಮಕ್ಕಳಿಗೆ ಯಾವ ಕೊರತೆ ಆಗದಂತೆ ನೋಡಿದ್ದಾರೆ. ಹದಿಹರೆಯದಲ್ಲಿ ಪ್ರೀತಿ ಸಹಜ. ಆದರೆ ತಂದೆಗಾಗಿ ಪ್ರೀತಿಸಿದ ಹುಡುಗನನ್ನು ಬಿಟ್ಟು, ತಂದೆ ತೋರಿಸಿದ ಗಂಡನ್ನು ಮದುವೆ ಆಗುತ್ತಾಳೆ. ಇದನ್ನು ವಾಸ್ತವ ಜಗತ್ತಿನಲ್ಲಿಯೂ ನಾವು ಕಾಣಲು ಸಾಧ್ಯ. ಕುಟುಂಬದವರಿಗೆ ನೋವು ಆಗಬಾರದು ಎನ್ನುವ ಮಕ್ಕಳು ಈಗಲೂ ಇದ್ದಾರೆ. ಚಿತ್ರಾ ಕೂಡ ತನ್ನ ಜೀವನದಲ್ಲಿ ಆಗಿದ್ದು ಆಯ್ತು ಮುಂದಿನ ಜೀವನ ಚೆನ್ನಾಗಿರಬೇಕು ಎಂದುಕೊಳ್ಳುತ್ತಾಳೆ. ಆದರೆ ಪತಿಯಾದವನು ಅನುಮಾನಪಡುತ್ತಾನೆ. ಅಂದರೆ ಅದು ಅವಳಿಗೆ ಸಿಡಿಲು ಬಡಿದಂತೆ ಆಗುತ್ತದೆ. ತನ್ನ ಬಂಧು ಬಳಗವನ್ನೆಲ್ಲ ಬಿಟ್ಟು ಬಂದವಳಿಗೆ ಗಂಡನೇ ಸರ್ವಸ್ವ. ಆದರೆ ಅವನೇ ಮೃಗೀಯವಾಗಿ ವರ್ತಿಸಿದರೆ ಆಕೆ ಪಾಲಿಗೆ ಭೂಮಿ ಕುಸಿದಂತೆ. ಈಗ ಕಥೆಗೆ ಹೊಸ ತಿರುವು ಸಿಕ್ಕಿದ್ದು, ಪತಿ ವಾಸ್ತವ ಅರಿತಿದ್ದಾರೆ. ಒಳ್ಳೆಯ ಜೀವನಕ್ಕೆ ನವಪಲ್ಲವಿ ಹಾಡಬೇಕಿದೆ.

◆ **ಬಣ್ಣದ ಲೋಕ ಹೇಗೆನಿಸುತ್ತದೆ?**

ಇಲ್ಲಿಗೆ ಬರಲು ನನಗೆ ಭಯ ಇರಲಿಲ್ಲ. ಆದರೆ ನನ್ನ ಬಂಧುಗಳಿಗಿತ್ತು. ಸಾಮಾನ್ಯವಾಗಿ ಕೆಲಹುಡುಗಿಯರು ಮದುವೆ ಆಗಿ ಜೀವನ ರೂಪಿಸಿಕೊಳ್ಳಬೇಕು ಎಂದುಕೊಳ್ಳುತ್ತಾರೆ. ಅನೇಕರು ಏನಾದರೂ ಸಾಧಿಸುವ ಕನಸು ಕಾಣುತ್ತಾರೆ. ಆ ನಿಟ್ಟಿನ ಪ್ರಯತ್ನ ನನ್ನದಾಗಬೇಕು ಎನ್ನುವ ಭಾವನೆ ನನ್ನದು. ಯಶಸ್ಸು ಸಿಗಲಿ ಸಿಗದಿರಲಿ ಯತ್ನ ಮಾತ್ರ ನಿಲ್ಲಬಾರದು. ಒಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ನೂರು ಅಂಕಕ್ಕೆ ಯತ್ನಿಸಿದರೆ ಕನಿಷ್ಠ 90 ಅಂಕ ಸಿಕ್ಕೇ ಸಿಗುತ್ತದೆ. ಕಿರುತೆರೆ ಪ್ರವೇಶ ಮಾಡಬೇಕು ಎಂದವಳಿಗೆ ಒಳ್ಳೆಯ ಪಾತ್ರ ಮೊದಲ ಬಾರಿಗೆ ಸಿಕ್ಕಿತ್ತು.

■ **ರಾಘವೇಂದ್ರ ಕೆ.**